



ಡಾ. ಎಸ್. ರಾಮಮೂರ್ತಿ

# 13-8-2015ರಿಂದ 19-8-2015ರವರೆಗೆ




ವಾರದ ಆರಂಭದಲ್ಲಿ ಸೋಮಾರಿತನ. ಕೆಲಸದಲ್ಲಿ ಮಂದಗತಿ. ವ್ಯಾಪಾರದಲ್ಲಿ ಲಾಭದ ಕೊರತೆ. ಕುಟುಂಬ ಸದಸ್ಯರ ಮೇಲೆ ಸಿಟ್ಟು. ಆರೋಗ್ಯ ವ್ಯತ್ಯಯ. ಆಪ್ತರಿಂದ ಸಲಹೆ. ವಿದ್ಯಾಭ್ಯಾಸದಲ್ಲಿ ಮುನ್ನಡೆ. ಉದ್ಯೋಗದಲ್ಲಿ ಸಮಾಧಾನ. ಲೇವಾದೇವಿಗಳಲ್ಲಿ ಲಾಭ. ಹಿರಿಯರೊಡನೆ ಮಹತ್ತರ ವಿಚಾರಗಳ ಚರ್ಚೆ, ಗೌರವ. ಶುಭದಿನ: 17; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸಮಾಧಾನ, ಉತ್ಸಾಹ. ನಿರೀಕ್ಷೆಯಂತೆ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ಆಪ್ತರಿಗೆ ಸಲಹೆ. ವಾರದ ಮಧ್ಯಭಾಗದಲ್ಲಿ ಆತಂಕ. ವಾಹನಗಳಿಂದ ಖರ್ಚು. ಅನಾವಶ್ಯಕ ಖರೀದಿ. ಆರೋಗ್ಯ ವ್ಯತ್ಯಯ. ಮಕ್ಕಳೊಂದಿಗೆ ವಿವಾದ. ವೃತ್ತಿ ವ್ಯವಹಾರಗಳಲ್ಲಿ ಏನಾದರೊಂದು ಸಮಸ್ಯೆ. ವಾರಾಂತ್ಯ ಮುನ್ನಡೆ. ಶುಭದಿನ: 14; ದುರ್ಗಾ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಸೌಖ್ಯ. ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರದಲ್ಲಿ ಲಾಭ. ಪ್ರೀತಿ ಪಾತ್ರರಿಂದ ಸಹಾಯ. ಗುರುಹಿರಿಯರಿಂದ ಮಾರ್ಗದರ್ಶನ. ಪ್ರಯಾಣದಲ್ಲಿ ನಿರಾತಂಕ. ಹಿತಕರ ಭೋಜನ. ವಿರೋಧಿಗಳಿಗೆ ಹಿನ್ನಡೆ. ವಾರಾಂತ್ಯದಲ್ಲಿ ಭಯ. ಚಂಚಲತೆ, ಅನಾವಶ್ಯಕ ತಿರುಗಾಟ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಶುಭದಿನ: 16; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ.




ಉದ್ಯೋಗ ವೃತ್ತಿ ವ್ಯವಹಾರಗಳಲ್ಲಿ ಪ್ರಗತಿ. ಕ್ರಯ ವಿಕ್ರಯ ಒಪ್ಪಂದ ಏಜೆನ್ಸಿಗಳಲ್ಲಿ ಲಾಭ. ತಾಳ್ಮೆ ಹೆಚ್ಚುವುದು. ಬಂಧುಗಳು ಸಹಕಾರ ನೀಡುವರು. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಹಿಂದಿನ ತಕರಾರುಗಳು ಮುಕ್ತಾಯಗೊಳ್ಳುವುದು. ವಿದೇಶಿ ಸಂಬಂಧ ಕಾರ್ಯಗಳಲ್ಲಿ ಸಫಲತೆ. ಕುಟುಂಬದಲ್ಲಿ ಶಾಂತಿ. ಶುಭದಿನ: 17; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ವಿಪರೀತ ಶ್ರಮ. ಸಮಯಕ್ಕೆ ಸರಿಯಾಗಿ ಮುಗಿಯದ ಕೆಲಸ ಕಾರ್ಯಗಳು. ಗ್ರಾಹಕರ ಮೇಲೆ ಕೋಪ ತಾಪ. ಲೇವಾದೇವಿಗಳಲ್ಲಿ ಹಾನಿ, ನಿದ್ರಾಹೀನತೆ. ವಾರದ ಮಧ್ಯಭಾಗದಿಂದ ಸಮಾಧಾನ. ಆತ್ಮಬಲ ಹೆಚ್ಚುವುದು. ವೃತ್ತಿ ಪ್ರವೃತ್ತಿಗಳಲ್ಲಿ ಪ್ರಗತಿ. ಆಟ ಪಾಠಗಳಲ್ಲಿ ಮೇಲುಗೈ. ಗೃಹ ನವೀಕರಣ ಚಿಂತನೆ. ಹಿತ ಸುದ್ದಿ. ಶುಭದಿನ: 16; ಗಣಪತಿ, ಗುರು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸಮಾಧಾನ. ದೇವತಾ ಕ್ಷೇತ್ರ ದರ್ಶನ. ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರದಲ್ಲಿ ಲಾಭ. ಉಡುಗೊರೆ ಪ್ರಾಪ್ತಿ. ವಾರದ ಮಧ್ಯಭಾಗದಲ್ಲಿ ಬೇಸರ. ಅಧಿಕ ಶ್ರಮ. ಕಾರ್ಯ ಹಿನ್ನಡೆ. ಲೆಕ್ಕಪತ್ರಗಳಲ್ಲಿ ತಪ್ಪುಗಳಾಗುವ ಸಾಧ್ಯತೆ. ಲೇವಾದೇವಿಗಳಲ್ಲಿ ಹಾನಿ. ಅಹಿತ ವಾರ್ತೆ. ವಾರಾಂತ್ಯದಲ್ಲಿ ಮನಶಾಂತಿ, ಮುನ್ನಡೆ. ಶುಭದಿನ: 14; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಅನುಕೂಲ, ಅಭಿವೃದ್ಧಿ. ಸರಾಗವಾಗಿ ನಡೆಯುವ ಕಾರ್ಯಗಳು. ವ್ಯಾಪಾರದಲ್ಲಿ ಸೂಕ್ತ ಲಾಭ. ವಾಹನ ಸೌಖ್ಯ. ಕ್ರೀಡೆಗಳಲ್ಲಿ ಸಫಲತೆ. ಬಂಧುಗಳಿಂದ ಸಲಹೆ. ಶುಭ ಕಾರ್ಯ ಯೋಜನೆ. ವಾರಾಂತ್ಯದಲ್ಲಿ ಅಶಾಂತಿ. ಸೋಮಾರಿತನ. ವೃತ್ತಿ ಪ್ರವೃತ್ತಿಗಳಲ್ಲಿ ನಿರಾಸಕ್ತಿ. ಅನಾರೋಗ್ಯ. ಶುಭದಿನ: 15; ಶಿವ, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ.




ಒತ್ತಡ ನಿವಾರಣೆಯಾಗುವುದು. ಮಾಡಿದ ತಪ್ಪುಗಳ ಅರಿವಾಗುವುದು. ಕಾರ್ಯಕಲಾಪಗಳು ಸಫಲವಾಗುವುವು. ವ್ಯಾಪಾರದಲ್ಲಿ ಲಾಭ ವೃದ್ಧಿ. ಕುಟುಂಬ ಸದಸ್ಯರು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕಾರ ನೀಡುವರು. ಸಂತಸದ ಸುದ್ದಿ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು. ಮಕ್ಕಳೊಂದಿಗೆ ವಿಶ್ವಾಸ ಹೆಚ್ಚುವುದು. ಶುಭದಿನ: 17; ಗಣಪತಿ, ಶಿವ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಕೆ. ಅಕಾಲ ಭೋಜನ. ಸಣ್ಣ ಪುಟ್ಟ ಪೆಟ್ಟಾಗುವ ಸಂಭವ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ. ಆತ್ಮಬಲ ಹೆಚ್ಚುವುದು, ಸಾಧು ಸಜ್ಜನರ ಭೇಟಿ. ಉದ್ಯೋಗದಲ್ಲಿ ಮುನ್ನಡೆ. ವ್ಯಾಪಾರದಲ್ಲಿ ಲಾಭ. ಹಿತಕರ ಭೋಜನ. ಶುಭದಿನ: 17; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಸಂತಸ. ಇಷ್ಟಾರ್ಥ ಸಿದ್ಧಿ. ಹಣದ ವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಸಮಾಧಾನ. ಆತ್ಮೀಯರ ಭೇಟಿ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಆತಂಕ. ಸಂದೇಶಗಳ ವಿಳಂಬ. ಕೋಪದ ಸನ್ನಿವೇಶಗಳು. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ವಿರೋಧಿಗಳಿಂದ ಉಪದ್ರವ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 14; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ.




ವಾರದ ಮಧ್ಯಭಾಗದವರೆಗೂ ಸಂತಸ. ಅಪೇಕ್ಷೆಯಂತೆ ನಡೆಯುವ ಕಾರ್ಯಗಳು. ವ್ಯಾಪಾರದಲ್ಲಿ ಲಾಭ. ಅಧ್ಯಯನದಲ್ಲಿ ಮುನ್ನಡೆ. ಮಕ್ಕಳಿಂದ ಸಹಾಯ. ಪತ್ರಾಗಮನದಿಂದ ಕುಟುಂಬ ಸದಸ್ಯರಲ್ಲಿ ಉತ್ಸಾಹ ಹೆಚ್ಚುವುದು. ವಾರಾಂತ್ಯದಲ್ಲಿ ಅಶಾಂತಿ. ಭಯದ ವಾತಾವರಣ. ಉದ್ಯೋಗ ವೃತ್ತಿಗಳಲ್ಲಿ ಒತ್ತಡ, ಕೋಪ ತಾಪ. ಶುಭದಿನ: 16; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.




ವಾರದ ಆರಂಭದಲ್ಲಿ ಚಂಚಲತೆ. ಮಕ್ಕಳೊಡನೆ ವಿವಾದ. ಕಾರ್ಯ ಕಲಾಪಗಳಲ್ಲಿ ತೊಡಕು. ಲೇವಾದೇವಿಗಳಲ್ಲಿ ಹಾನಿ. ಅಕಾಲ ಭೋಜನ. ವಾರದ ಮಧ್ಯಭಾಗದಿಂದ ಚೇತರಿಕೆ. ಆಪ್ತರಿಂದ ಸಲಹೆ. ಉದ್ಯೋಗದಲ್ಲಿ ಪ್ರಗತಿ. ಅಧಿಕಾರಿ ವರ್ಗದವರಿಂದ ಸಹಾಯ. ವ್ಯಾಪಾರ ವೃತ್ತಿಗಳಲ್ಲಿ ಲಾಭ. ಶುಭದಿನ: 17; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.